# ನಿಮ್ಮೊಡನೆ

# ಅರಣ್ಯ ವೃದ್ಧಿ: ವರದಿ ವಸ್ತುನಿಷ್ಠವೇ?

ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸುಮಾರು 2,700 ಸಾವಿರ ಚ.ಕಿ.ಮೀ. ನಷ್ಟು ಅರಣ್ಯ ಪ್ರದೇಶ ನಾಶವಾಗಿದೆ. 148 ಚ.ಕಿ.ಮೀ. ಪ್ರದೇಶದಲ್ಲಿ ದಟ್ಟ ಅರಣ್ಯ ಬೆಳೆಸಿರುವುದಾಗಿ ಸರ್ಕಾರ ಹೇಳಿದ್ದರೂ ಇದರಲ್ಲಿ ನೆಡುತೋಪುಗಳು, ಕಾಫಿ– ಚಹಾ ತೋಟಗಳನ್ನು ಸೇರಿಸಿರುವುದು ಕಾಡಿನ ನಾಶವನ್ನು ಮರೆಮಾಚುವ ತಂತ್ರವಾಗಿದೆ.

ಕಳೆದ ಎರಡು ವರ್ಷಗಳಲ್ಲಿ ದೇಶದ ಒಟ್ಟು ಅರಣ್ಯ ಪ್ರದೇಶದ ವಿಸ್ತೀರ್ಣ ಶೇ. 0.94ರಷ್ಟು ಹೆಚ್ಚಾಗಿದೆ ಎಂದು ಇತ್ತೀಚೆಗೆ ಕೇಂದ್ರ ಪರಿಸರ ಸಚಿವರು ಬಿಡುಗಡೆ ಮಾಡಿದ '2017ರ ಅರಣ್ಯ ಕುರಿತ ವಸ್ತುಸ್ಥಿತಿಯ ವರದಿ'ಯಲ್ಲಿ ಹೇಳಲಾಗಿದೆ. 2015– 2017ರ ಅವಧಿಯಲ್ಲಿ ಒಟ್ಟು ಅರಣ್ಯ ಪ್ರದೇಶ 7.01 ಲಕ್ಷ ಚ.ಕಿ.ಮೀ.ನಿಂದ 7.08 ಚ.ಕಿ.ಮೀ.ನಷ್ಟು ಜಾಸ್ತಿಯಾಗಿದ್ದು, ಒಟ್ಟಾರೆ ಹೆಚ್ಚಳ 8021 ಚ.ಕಿ.ಮೀ. ಎಂಬುದು ಈ ವರದಿ ಸಿದ್ಧಪಡಿಸಿದ ಭಾರತೀಯ ಅರಣ್ಯ ಸರ್ವೇಕ್ಷಣ ಇಲಾಖೆಯ ಹೇಳಿಕೆ. ಇದರಲ್ಲಿ ಅರಣ್ಯದ ಪಾಲು 6778 ಚ.ಕಿ.ಮೀ.ನಷ್ಟಿದ್ದರೆ, ಮರಗಳಿರುವ ಪ್ರದೇಶ 1243 ಚ.ಕಿ.ಮೀ.

ಈ ಎಲ್ಲ ಅಂಕಿ– ಅಂಶಗಳನ್ನು ಉಪಗ್ರಹ ಇಮೇಜಿಂಗ್ ತಂತ್ರಜ್ಞಾನದಿಂದ ಪಡೆಯಲಾಗಿದೆ. ದೇಶದ ಒಟ್ಟು ಭೂ ಪ್ರದೇಶದ ಶೇ. 21ರಷ್ಟು ಭಾಗವನ್ನು ಕಾಡು ಆವರಿಸಿಕೊಂಡಿದೆ. ಶೇ. 33ರಷ್ಟು ಭಾಗದಲ್ಲಿ ಅರಣ್ಯ ಬೆಳೆಸುವ ಸರ್ಕಾರದ ಯೋಜನೆಯ ದೃಷ್ಟಿಯಿಂದ ಇದು ಮೇಲ್ನೋಟಕ್ಕೆ ಸಂತಸದ ವಿಚಾರವೆನಿಸಬಹುದು. ಅಗಾಧ ಜನಸಂಖ್ಯೆ ಹಾಗೂ ಮೇವಿಗಾಗಿ ಅರಣ್ಯದ ಮೇಲೆ ಹೆಚ್ಚುತ್ತಿರುವ ಒತ್ತಡ, ಕಾಡನ್ನು ಅತಿಕ್ರಮಿಸಿ ಕೃಷಿ ಭೂಮಿಯಾಗಿ ಪರಿವರ್ತನೆ ಮಾಡಿಕೊಳ್ಳುವವರ ಮಧ್ಯೆಯೂ ಇಂತಹದ್ದೊಂದು ಸಾಧನೆಗಾಗಿ ಬೀಗುವುದು ಕೂಡಾ ಸಹಜವೇ. ಆದರೆ ಈ ಬೆಳವಣಿಗೆಯಲ್ಲಿ ಕೃಷಿ ಅರಣ್ಯ ಭೂಮಿ ಹಾಗೂ ಖಾಸಗಿ ಅರಣ್ಯದ ಪಾಲಿರುವುದು, ನೆಡುತೋಪು, ತೋಟಗಾರಿಕೆಯಂತಹ ಚಟುವಟಿಕೆಗಳಿಂದ ಖಾಲಿ ಜಾಗವೂ ಮರಗಳಿಂದ ಆವೃತವಾಗಿ ಅರಣ್ಯವಾಗಿ ಮಾರ್ಪಟ್ಟಿದೆ ಎಂಬ ವರದಿಯಲ್ಲಿರುವ ಅಂಶ ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಶೇ.10ಕ್ಕಿಂತ ಅಧಿಕ ಪ್ರಮಾಣದಲ್ಲಿ ಮರಗಳನ್ನು ಹೊಂದಿರುವ ಒಂದು ಹೆಕ್ಟೇರ್ ಭೂಮಿಯನ್ನೂ ಅರಣ್ಯ ಪ್ರದೇಶ ಎಂದು ವರದಿಯಲ್ಲಿ ಅರ್ಥೈಸಲಾಗಿದ್ದು ಚಹ, ಕಾಫಿ ತೋಟಗಳೂ ಇದರ ವ್ಯಾಪ್ತಿಯಲ್ಲಿ ಸೇರಿರುವುದು ಚರ್ಚಾಸ್ಪದವಾಗಿದೆ.

ಏಕೆಂದರೆ ಈ ಎರಡು ವರ್ಷಗಳ ಅವಧಿಯಲ್ಲಿ ಸುಮಾರು 2,700 ಸಾವಿರ ಚ.ಕಿ.ಮೀ. ನಷ್ಟು ಅರಣ್ಯ ಪ್ರದೇಶ ಸಂಪೂರ್ಣ ನಾಶವಾಗಿದೆ ಎಂಬ ಅಂಕಿ– ಅಂಶವನ್ನು ವರದಿಯಲ್ಲಿ ನೀಡಿರುವ ಸರ್ಕಾರ, ಮರಗಳು ನೈಸರ್ಗಿಕವಾಗಿ ಉರುಳುವುದು, ಪ್ರವಾಹ, ಅಣೆಕಟ್ಟಿನಿಂದ ಮುಳುಗಡೆ, ಕೃಷಿ ಭೂಮಿ ವಿಸ್ತರಣೆ ಹಾಗೂ ಅಭಿವೃದ್ಧಿ ಕಾಮಗಾರಿ ಇದಕ್ಕೆ ಕಾರಣ ಎಂದು ಒಪ್ಪಿಕೊಂಡಿದೆ. ಇದರಲ್ಲಿ 148 ಚ.ಕಿ.ಮೀ. ಪ್ರದೇಶದಲ್ಲಿ ದಟ್ಟ ಅರಣ್ಯ ಬೆಳೆಸಿರುವುದಾಗಿ ಹೇಳಿರುವುದು ಈ ಅಗಾಧ ಪ್ರಮಾಣದ ಕಾಡಿನ ನಾಶವನ್ನು ಮರೆಮಾಚುವ ತಂತ್ರವಷ್ಟೆ ಎಂಬುದು ತಜ್ಞರ ಅಂಬೋಣ.

ನೈಸರ್ಗಿಕ ಕಾಡು ಎರಡೇ ವರ್ಷಗಳಲ್ಲಿ ಬೆಳೆಯುವುದು ಅಸಾಧ್ಯದ ಮಾತು. ಬೆತ್ತಲಾಗಿರುವ ಭೂ ಪ್ರದೇಶವನ್ನು ಸಾಮಾನ್ಯವಾಗಿ ದಟ್ಟವಾಗಿರುವ ಅರಣ್ಯವನ್ನಾಗಿ ತಯಾರು ಮಾಡಲು ಕೂಡಾ ಕನಿಷ್ಠ ಹತ್ತು ವರ್ಷಗಳು ಬೇಕು. ಹೀಗಿರುವಾಗ ಎರಡು ವರ್ಷಗಳಲ್ಲಾಗಿರುವ ಹೆಚ್ಚಳದಲ್ಲಿ ನೆಡುತೋಪುಗಳು, ಕಾಫಿ, ಚಹ, ರಬ್ಬರ್ ಮೊದಲಾದ ತೋಟಗಳೂ ಸೇರಿಕೊಂಡು ಅನುಮಾನ ಹುಟ್ಟಿಸಿವೆ.

ಇಂತಹ ನೆಡುತೋಪುಗಳು ನೈಸರ್ಗಿಕ ಅರಣ್ಯಕ್ಕೆ ಪರ್ಯಾಯವೇ ಎಂಬ ಪ್ರಶ್ನೆಗಳು ಏಳುವುದು ಸಹಜ. ತಜ್ಞರ ಪ್ರಕಾರ , ಇಂತಹ ನೆಡುತೋಪುಗಳಲ್ಲಿ ಗಿಡ– ಮರಗಳ ವೈವಿಧ್ಯತೆ ಕಡಿಮೆ. ಜೀವ ವೈವಿಧ್ಯತೆಗಳಿಗೂ ಈ ನೆಡುತೋಪುಗಳು ಆಶ್ರಯ ನೀಡಲಾರವು. ಆದರೆ ನೈಸರ್ಗಿಕ ಕಾಡುಗಳಲ್ಲಿ ಮರ–ಗಿಡಗಳು, ಹುಲ್ಲು, ಪೊದೆಗಳು, ಪ್ರಾಣಿಗಳ ವೈವಿಧ್ಯತೆ ಜಾಸ್ತಿ. ಜೊತೆಗೆ ನೈಸರ್ಗಿಕ ಅರಣ್ಯ ಹಾಗೂ ನೆಡುತೋಪುಗಳ ಬಗ್ಗೆ ಈ ವರದಿಯಲ್ಲಿ ಪ್ರತ್ಯೇಕ ಅಂಕಿ– ಅಂಶ ನೀಡದಿರುವುದು ಅರಣ್ಯ ನಾಶವನ್ನು ಸಾಮಾನ್ಯ ಜನರಿಂದ ಮರೆಮಾಚುವ ಯತ್ನವಾಗಿದೆ ಎಂಬ ಟೀಕೆಗಳು ಕೇಳಿ ಬರುತ್ತಿವೆ.

ಒಂದು ವರದಿಯ ಪ್ರಕಾರ, ಪ್ರತಿ ವರ್ಷ ಸರ್ಕಾರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಹೆಸರಲ್ಲಿ ಸುಮಾರು 120 ಚ.ಕಿ.ಮೀ. ಅರಣ್ಯ ಪ್ರದೇಶ ನಾಶವಾಗುತ್ತಿದೆ. ಶೇ.63ರಷ್ಟು ಕಾಡಿನ ಪ್ರಮಾಣ ಹೆಚ್ಚಾಗಿದೆ ಎಂದು ವರದಿ ಹೆಸರಿಸಿರುವ ಕರ್ನಾಟಕ, ಕೇರಳ ಮತ್ತು ಆಂಧ್ರಪ್ರದೇಶದಲ್ಲೂ ಅರಣ್ಯ ನಾಶ ಎಗ್ಗಿಲ್ಲದೇ ನಡೆಯುತ್ತಿದೆ. ರಾಜ್ಯದ ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತೋಟಗಳನ್ನು ಬೆಳೆಸಲು ನಿತ್ಯ ಹರಿದ್ವರ್ಣದ ಕಾಡುಗಳು ಅಪಾರ ಪ್ರಮಾಣದಲ್ಲಿ ನಾಶವಾಗುತ್ತಿವೆ. ಪಶ್ಚಿಮ ಘಟ್ಟದಲ್ಲೂ ಅರಣ್ಯಗಳ ಮೇಲಿನ ಈ ಪ್ರಹಾರ ತಡೆಯಿಲ್ಲದೇ ನಡೆಯುತ್ತಿದ್ದು, ಕಸ್ತೂರಿ ರಂಗನ್ ವರದಿ ಜಾರಿ ವಿಳಂಬದಿಂದಾಗಿ ಭೂಗಳ್ಳರಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ. ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯನ್ನು ಜೋಡಿಸುವ 65 ಕಿ.ಮೀ. ಉದ್ದದ ಹೆದ್ದಾರಿ ಯೋಜನೆಗೆ ಇನ್ನೊಂದಿಷ್ಟು ಮರಗಳ ಹನನ ನಡೆದು, ಜೀವ ವೈವಿಧ್ಯತೆಗೂ ಧಕ್ಕೆಯಾಗಲಿದೆ.

ಸರ್ಕಾರ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿರುವ ಕಾಡಿನ ಪ್ರದೇಶವನ್ನು ಅರಣ್ಯ ಇಲಾಖೆಗೆ ಒಪ್ಪಿಸಬೇಕು; ಹವಾಮಾನ ಬದಲಾವಣೆ, ಜಾಗತಿಕ ತಾಪಮಾನದ ಹೆಚ್ಚಳದ ಈ ಸಂದರ್ಭದಲ್ಲಿ ಅರಣ್ಯ ಉಳಿಸುವ, ಬೆಳೆಸುವ ಕೆಲಸ ಶೀಘ್ರವಾಗಿ ಆಗಬೇಕಾಗಿದೆ.

■ ಸುಧಾ ಹೆಗಡೆ



ಈಶ್ವರ್